

ಅಲಿಯಾ ತನ್ನ ಬರ್ತ್‌ಡೇ ಪಾರ್ಟಿಯನ್ನು ಈ ಸಲ 'ಓನ್ಲೀ ವುಮನ್' ಮಾಡಿದ್ದಾಳೆ. ಅದಕ್ಕೇ ರಣಬೀರ್ ಬಂದಿಲ್ಲ ಎನ್ನುವುದು ಒಂದು ವಾದ. ಆದರೆ ಪಾರ್ಟಿಗೆ ಬರದಿದ್ದರೂ ಬಳಿಕ ಮನೆಗೆ ಬರಬಹುದಿತ್ತಲ್ಲ? ಕಳೆದ ವರ್ಷ ಬರ್ತ್‌ಡೇ ಪಾರ್ಟಿಗೆ ಆತ ಮನೆಗೆ ಬಂದದ್ದು, ಅಲಿಯಾಳನ್ನು ತಬ್ಬಿ ಮುತ್ತುಕೊಟ್ಟದ್ದು ಎಲ್ಲ ಫೋಟೊಗಳೂ ಅಲಿಯಾಳ ಇನ್‌ಸ್ಟಾಗ್ರಾಮ್‌ನಲ್ಲಿ ರಾರಾಜಿಸಿತ್ತಲ್ಲ? ಈ ಸಲ ಅಲಿಯಾಳ ಅಮ್ಮ ಸೋನಿ ರಾಜ್ದಾನ್, ರಣಬೀರ್ ಅಮ್ಮ ನೀತು ಕಪೂರ್ ಸಹಿತ ಕುಟುಂಬದ ಎಲ್ಲರೂ ಶುಭಾಶಯಗಳನ್ನು ಕೋರಿದ್ದು ಇನ್‌ಸ್ಟಾಗ್ರಾಮ್‌ನಲ್ಲಿ ಬಂದಿರುವಾಗ, ರಣಬೀರ್ ಶುಭಾಶಯ ಕೋರಿದ್ದಾದರೂ ಬರಬೇಕಿತ್ತಲ್ಲ..? ಇವು ಕೇಳಿಬರುತ್ತಿರುವ ಪ್ರಶ್ನೆಗಳು. ಅದರಲ್ಲೂ ರಣಬೀರ್ ಅವತ್ತು ಮುಂಬೈನಲ್ಲೇ ಇದ್ದಿರುವಾಗ ಇಂತಹ ಪ್ರಶ್ನೆಗಳು ಅನುಮಾನ ಹುಟ್ಟಿಸುವುದು ಸಹಜವೇ.

ಕಳೆದ ವರ್ಷವೂ ಹೀಗೆಯೇ 'ಅಲಿಯಾ– ರಣಬೀರ್ ಜೋಡಿ ಬ್ರೇಕಪ್ ಆಗಿದೆ' ಎಂದು ಸುದ್ದಿ ಹಬ್ಬಿತ್ತು. ಆಗ ಸಂದರ್ಶನವೊಂದರಲ್ಲಿ ಅಲಿಯಾ ಸಿಟ್ಟಿಗೆದ್ದು, 'ನಮ್ಮ ರಿಲೇಷನ್‌ಶಿಪ್ ಮುರಿದಿಲ್ಲ. ಆದರೆ ನನ್ನ ಮದುವೆ ಯಾವಾಗ ಎಂದು ನೀವು ಕೇಳಿದರೆ ನಾನು ಉತ್ತರಿಸಲಾರೆ' ಎಂದಿದ್ದಳು. ಅಂದ ಹಾಗೆ ಈ ಜೋಡಿ ನಟಿಸಿದ 'ಬ್ರಹ್ಮಾಸ್ತ್ರ' ಚಿತ್ರ ಬಿಡುಗಡೆಗೆ ದಿನ ನಿಗದಿಯಾಗಿದೆ. ಚಿತ್ರದಲ್ಲಿ ಅಮಿತಾಭ್ ಬಚ್ಚನ್ ಕೂಡಾ ಮುಖ್ಯ ಪಾತ್ರವೊಂದರಲ್ಲಿದ್ದಾರೆ. ಬಾಲಿವುಡ್‌ನಲ್ಲಿ ಏನು ಬೇಕಾದರೂ ಆಗಬಹುದು; ಮತ್ತೊಮ್ಮೆ ಈ ಜೋಡಿಯ 'ಪ್ಯಾಚಪ್' ಕೂಡಾ. ■



# ಕರೀನಾಳ ಬೆಕ್ಕು

ಕರೀನಾ ಕಪೂರ್ ಖಾನ್ ಕಳೆದ ತಿಂಗಳು ಇನ್‌ಸ್ಟಾಗ್ರಾಮ್ ಖಾತೆ ತೆರೆದಾಗ ಹೇಳಿದ್ದು– 'ಬೆಕ್ಕು ಚೀಲದಿಂದ ಹೊರಬಂದಿದೆ. ಹಲೋ ಇನ್‌ಸ್ಟಾಗ್ರಾಮ್' ಎಂದು. ಜೊತೆಗೆ ಎರಡೂ ಕಾಲುಗಳನ್ನು ಕೈಗಳಲ್ಲಿ ಬಿಗುಹಿಡಿದು ನೆಲದ ಮೇಲೆ ಕುಳಿತಿರುವ ಫೋಟೊ! ಅಭಿಮಾನಿಗಳು ಥ್ರಿಲ್ ಆಗಿದ್ದಾರೆ. ಇನ್‌ಸ್ಟಾಗ್ರಾಮ್‌ಗೆ ಆಕೆ ಬರುವ ಸುದ್ದಿ ತಿಳಿದು ಎರಡೇ ದಿನದಲ್ಲಿ 4.5 ಲಕ್ಷ ಜನ ಖಾತೆಯನ್ನು ಇಣುಕಿನೋಡಿದ್ದರು. ಕಪ್ಪು ಟಾಪ್ ಮತ್ತು ಕಪ್ಪು ಪ್ಯಾಂಟ್ ಧರಿಸಿ ಕುಳಿತಿರುವ ಆಕೆಯ ಅಮಾಯಕ ಮುಖದ ಬಗ್ಗೆಯೇ ಕಾಮೆಂಟುಗಳು ಬಂದಿದ್ದವು.

ಕರೀನಾ ಹೆಸರಲ್ಲಿ ಫೇಕ್ ಅಕೌಂಟ್‌ಗಳಿದ್ದವು, ಅದು ಅವಳಿಗೂ ಗೊತ್ತಿತ್ತು. ಹಾಗೆಯೇ ಆಕೆಯ ಫ್ಯಾನ್ ಕ್ಲಬ್‌ಗಳೂ ಸಾಮಾಜಿಕ ಜಾಲತಾಣದಲ್ಲಿ ಸಕ್ರಿಯವಾಗಿದ್ದು 50 ಲಕ್ಷದಷ್ಟು ಅಭಿಮಾನಿಗಳೂ ಇದ್ದಾರೆ. ಇನ್‌ಸ್ಟಾಗ್ರಾಮ್ ಮೂಲಕ ಅಧಿಕೃತವಾಗಿ ವೈಯಕ್ತಿಕ ವಿಷಯಗಳನ್ನು, ಫೋಟೊ, ವಿಡಿಯೊಗಳನ್ನು ಹಂಚಿಕೊಳ್ಳಲು ಕರೀನಾ ಶುರು ಮಾಡಿದ ಮೊದಲ ಎರಡು ವಾರಗಳಲ್ಲಿ ಇನ್‌ಸ್ಟಾಗ್ರಾಮ್‌ನಲ್ಲಿ ಹೆಚ್ಚಿನ ಪೋಸ್ಟ್‌ಗಳಿರಲಿಲ್ಲ. ಆ ಬಳಿಕದ ಪೋಸ್ಟ್‌ಗಳಿಗೆ ಅಭಿಮಾನಿಗಳಿಂದ ಸಿಕ್ಕಾಪಟ್ಟೆ ಪ್ರತಿಕ್ರಿಯೆಗಳು ಬಂದಿವೆ. ಕೊರೊನಾ ವೈರಸ್ ಕುರಿತು ಉಲ್ಲೇಖಿಸಿ ತನ್ನ ಬಾಲ್ಯದ ಫೋಟೊ ಪೋಸ್ಟ್ ಹಾಕಿರುವ ಕರೀನಾ, 'ನಾನು ಬಾಲ್ಯದಿಂದಲೂ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಬಂದವಳು' ಎಂದಿದ್ದಾಳೆ. ಕಳೆದ ವಾರದ ಆಕೆಯ ಒಂದು ಪೋಸ್ಟ್‌ಗೆ ಒಂದು ಗಂಟೆಯಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಲೈಕ್‌ಗಳು ಬಂದಿರುವುದು ವಿಶೇಷ.

■ ಬಿಂದು